RNU AIR DHARWAD

JUNE 21, 2025

**AKASHAVANI - DHARWAD**

**PRADESH SAMACHARA (KANNADA) 08.30 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**11ನೇ, ಅಂತಾರಾಷ್ಟ್ರೀಯ ಯೋಗ ದಿನ; ಯೋಗ ಇಂದು, ಜೀವನ ಶೈಲಿ ಮಾತ್ರವಲ್ಲ; ಸಂಘಟಿತ ವಿಶ್ವ ನಿರ್ಮಾಣದ, ಲೋಕ ನೀತಿ – ಪ್ರಧಾನಮಂತ್ರಿ ನರೇಂದ್ರ ಮೋದಿ.**

**ಯೋಗ ಹಾಗೂ ಫಿಟ್ ಇಂಡಿಯಾ ಅಭಿಯಾನ; ಜನರಲ್ಲಿ ಮೂಡಿದ ಆರೋಗ್ಯ ಜಾಗೃತಿ.**

**ನೇಕಾರಿಕೆ ಉತ್ತೇಜಿಸಲು, ಏಕ ನಿಗಮ ಸ್ಥಾಪನೆಗೆ, ರಾಜ್ಯ ಸರ್ಕಾರದ, ಚಿಂತನೆ.**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ; 'ಎಕ್ಸಲೆನ್ಸ್' ಪುರಸ್ಕಾರಕ್ಕೆ, ಭಾಜನ.**

<><><>

**ಈಗ ವಾರ್ತೆಗಳ ವಿವರ**

<><><>

**ಯೋಗ ವಿಶೇಷ ಜಿಂಗಲ್ 30 ಸೆಕೆಂದುಗಳು**

<><><>

**ಯೋಗ ಜನಾಂದೋಲನವಾಗಿ ರೂಪುಗೊಂಡ, ಒಂದು ದಶಕದ ಬಳಿಕ, ಮನುಷ್ಯತ್ವದ ಉನ್ನತಿಗಾಗಿ, ವಿಶ್ವವನ್ನು ಜೋಡಿಸುವ ಸಾಧನವಾಗಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಆಂಧ್ರ ಪ್ರದೇಶದ, ವಿಶಾಖಪಟ್ಟಣಂ'ನ, ಶ್ರೀ ರಾಮಕೃಷ್ಣ ಪರಮಹಂಸ ಕಡಲ ತೀರದಲ್ಲಿ ಆಯೋಜಿಸಿದ್ದ, ಪ್ರಧಾನ ಯೋಗ ದಿನಾಚರಣೆ ಕಾರ್ಯಕ್ರಮ, 'ಯೋಗಾಂಧ್ರ'ದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.**

<><><>

**1. ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 65 ಸೆಕೆಂದುಗಳು**

<><><>

ಯೋಗಾಂಧ್ರ ಯೋಗೋತ್ಸವದಲ್ಲಿ, 2 ಕೋಟಿಗೂ ಅಧಿಕ ಜನ, 10 ಲಕ್ಷಕ್ಕೂ ಅಧಿಕ ಸಂಸ್ಥೆಗಳು, ಯೋಗ ಪೋರ್ಟಲ್‌ನಲ್ಲಿ ಹೆಸರು ನೊಂದಾಯಿಸಿ, ಯೋಗ ದಿನಾಚರಣೆಯನ್ನು, ಜನಾಂದೋಲನವಾಗಿಸಿವೆ. ಜನ ಸಹಭಾಗಿತ್ವದಲ್ಲಿ ಈ ಯೋಗೋತ್ಸವ, ನನ್ನಿಂದ–ನಾವು ಎಂಬ ಭಾವದ ಕಡೆಗಿನ ಪಯಣವಾಗಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

<><><>

2. ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 78ಸೆಕೆಂದುಗಳು

<><><>

11ನೇ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ, ನಾಡಿನಾದ್ಯಂತ ಯೋಗಪಟುಗಳಿಂದ, ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮಗಳು, ಈ ಬೆಳಗ್ಗೆ ಜರುಗಿದವು. 'ಒಂದೇ ಭೂಮಿ, ಒಂದೇ ಆರೋಗ್ಯಕ್ಕಾಗಿ ಯೋಗ' ಧ್ಯೇಯದೊಂದಿಗೆ, ಭಾರತದ 100 ಐತಿಹಾಸಿಕ ತಾಣಗಳು ಹಾಗೂ 50ಕ್ಕೂ ಹೆಚ್ಚು ಸಾಂಸ್ಕೃತಿಕ ತಾಣಗಳಲ್ಲಿ, ಯೋಗ ಸಂಗಮ – ಸಾಮೂಹಿಕ ಯೋಗ ಪ್ರದರ್ಶನದಲ್ಲಿ, ಜನ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡಿದ್ದಾರೆ. ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಿದ್ದ, ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ಸೇರಿದಂತೆ, ಗಣ್ಯರು, ಯೋಗಪಟುಗಳು, ವಿಶೇಷ ಆಹ್ವಾನಿತ ಯೋಗ ಗುರುಗಳು ಪಾಲ್ಗೊಂಡು, ಸಾಮೂಹಿಕವಾಗಿ ಯೋಗಾಸನ ಪ್ರದರ್ಶಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಹುಬ್ಬಳ್ಳಿಯ ಗೋಕುಲದ, ವಿಶ್ವ ಶ್ರಮ ಚೇತನ ಯೋಗ ಮತ್ತು ಸಂಶೋಧನಾ ಕೇಂದ್ರದಲ್ಲಿ ಜರುಗಿದ, ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ, ಧಾರವಾಡ ಆಕಾಶವಾಣಿ ಕೇಂದ್ರದ, ಕಾರ್ಯಕ್ರಮ ಮುಖ್ಯಸ್ಥ ಶರಣಬಸವ ಚೋಳಿನ ಪಾಲ್ಗೊಂಡು, ಸ್ಥಳೀಯ ಯೋಗಪಟುಗಳೊಂದಿಗೆ, ಯೋಗ ಪ್ರದರ್ಶನ ನೀಡಿದರು.

<><><>

ಆಯುಷ್ ಇಲಾಖೆ, ಹಾವೇರಿಯ ರಜನಿ ಸಭಾಂಗಣದಲ್ಲಿ ಆಯೋಜಿಸಿದ, ಯೋಗ ದಿನಾಚರಣೆ ನಿಮಿತ್ತ, ಸಾಮೂಹಿಕ ಯೋಗ ಪ್ರದರ್ಶನದಲ್ಲಿ, ಜಿಲ್ಲಾಡಳಿತದ ಅಧಿಕಾರಿಗಳು, ಸ್ಥಳೀಯ ಯೋಗ ಸಂಸ್ಥೆಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.

<><><>

ಕಲಬುರಗಿಯಲ್ಲಿ ಆಯೋಜಿಸಿದ್ದ, ಯೋಗ ದಿನಾಚರಣೆ ಹಿನ್ನೆಲೆ, ಯೋಗ ನಡಿಗೆ ಜಾಥಾಕ್ಕೆ, ಶಾಸಕ ಅಲ್ಲಮಪ್ರಭು ಪಾಟೀಲ ಚಾಲನೆ ನೀಡಿದರು. ಸ್ಥಳೀಯ ಯೋಗ ಸಂಸ್ಥೆಗಳ ಪದಾಧಿಕಾರಿಗಳು, ಯೋಗಪಟುಗಳು ಹಾಗೂ ಸಾರ್ವಜನಿಕರು ಸೇರಿದಂತೆ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಪಾಲ್ಗೊಂಡಿದ್ದರು.

<><><>

ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ, ಸಾಮೂಹಿಕ ಯೋಗ ಪ್ರದರ್ಶನದ ಬಳಿಕ, ಉಚಿತ ಆಯುರ್ವೇದ ಆರೋಗ್ಯ ಚಿಕಿತ್ಸೆ ಶಿಬಿರ ನಡೆಯಲಿದೆ ಎಂದು, ಜಿಲ್ಲಾ ಆಯುಷ್ ಅಧಿಕಾರಿ ತಿಳಿಸಿದ್ದಾರೆ.

<><><>

ಯೋಗ ದಿನಾಚರಣೆ ಹಿನ್ನೆಲೆ, ಬೆಳಗಾವಿಯಲ್ಲಿ ಜರುಗಿದ, ಯೋಗ ನಡಿಗೆ ಕಾರ್ಯಕ್ರಮಕ್ಕೆ, ಆಯುಷ್ ಇಲಾಖೆ ಅಧಿಕಾರಿ, ಶ್ರೀಕಾಂತ ಸುಣದೋಳಿ ಚಾಲನೆ ನೀಡಿದರು.

<><><>

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಯೋಗ ಹಾಗೂ ಫಿಟ್ ಇಂಡಿಯಾ ಅಭಿಯಾನಗಳ ಮೂಲಕ, ಜನರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸಿವೆ ಎಂದು, ಕೇಂದ್ರ ಗೃಹ ಖಾತೆ ಸಚಿವ, ಅಮಿತ್ ಶಾ ಹೇಳಿದ್ದಾರೆ. ಬೆಂಗಳೂರು ಉತ್ತರ ತಾಲೂಕಿನ, ನಗರೂರು ಗ್ರಾಮದ, ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಆವರಣದಲ್ಲಿ, ಬಿ.ಜಿ.ಎಸ್. ವೈದ್ಯಕೀಯ ಆಸ್ಪತ್ರೆ ಹಾಗೂ ಮಹಾವಿದ್ಯಾಲಯದ, ನೂತನ ಕಟ್ಟಡವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಆಯುಷ್ಮಾನ್ ಭಾರತ ಯೋಜನೆಯಡಿ, ದೇಶದ 60 ಕೋಟಿ ಬಡ ಜನರಿಗೆ 5 ಲಕ್ಷ ರೂಪಾಯಿ ವರೆಗೆ, ಉಚಿತ ಆರೋಗ್ಯ ಸೇವೆ ಒದಗಿಸಲಾಗುತ್ತಿದೆ. ದೇಶಾದ್ಯಂತ ವೈದ್ಯರು ಹಾಗೂ ವೈದ್ಯಕೀಯ ಸೀಟುಗಳ ಸಂಖ್ಯೆ ಹೆಚ್ಚಿಸುವಲ್ಲಿ, ಕೇಂದ್ರ ಸರ್ಕಾರ ಪ್ರಮುಖ ಪಾತ್ರ ವಹಿಸಿದೆ ಎಂದರು.

<><><>

ವಿದ್ಯುತ್ ಕೈಮಗ್ಗ ನಿಗಮ ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮಗಳನ್ನು ವಿಲೀನಗೊಳಿಸಿ, ಏಕ ನಿಗಮ ಸ್ಥಾಪಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು, ಜವಳಿ ಖಾತೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ, ಚರಕ ಹಾಗೂ ದೇಸಿ ಟ್ರಸ್ಟ್ ಆಯೋಜಿಸಿರುವ, ಎರಡು ದಿನಗಳ 'ಕೊಡು–ಕೊಳ್ಳುವವರ ಸಮಾವೇಶ' ಉದ್ಘಾಟಿಸಿ ಅವರು, ಮಾತನಾಡಿದರು. ಸಾಂಪ್ರದಾಯಿಕ ನೇಕಾರಿಕೆಗೆ ಉತ್ತೇಜನ ನೀಡಿ, ನೇಕಾರರ ಜೀವನ ಸುಧಾರಣೆ ಉದ್ದೇಶದಿಂದ, ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನ ಯುಗದಲ್ಲಿ, ಪಾರಂಪರಿಕ ಉದ್ಯಮಗಳನ್ನು ಉಳಿಸಿ, ಬೆಳೆಸುವ ಅಗತ್ಯವಿದೆ, ಹೆಗ್ಗೋಡು ಚರಕ ಸಂಸ್ಥೆ, ಸಾಂಪ್ರದಾಯಿಕ ನೇಕಾರಿಕೆಯನ್ನು ಉತ್ತೇಜಿಸುತ್ತಿದ್ದು, ಸಂಸ್ಥೆಗೆ ಅಗತ್ಯ ಸಹಕಾರ ನೀಡಲು ಸರ್ಕಾರ ಬದ್ಧವಿದೆ ಎಂದರು. ಕೈಮಗ್ಗ ಜವಳಿ ಇಲಾಖೆ ಅಭಿವೃದ್ಧಿ ಆಯುಕ್ತರಾದ, ಕೆ.ಜ್ಯೋತಿ ಮಾತನಾಡಿ, ಸರ್ಕಾರ 'ಮಹಾತ್ಮ ಗಾಂಧಿ ವಸ್ತ್ರೋದ್ಯಮ' ಯೋಜನೆ ರೂಪಿಸಿದ್ದು, ಕೈಮಗ್ಗ ನೇಕಾರರನ್ನೇ ಷೇರುದಾರರನ್ನಾಗಿ ಮಾಡಲಾಗುತ್ತಿದೆ ಎಂದರು.

<><><>

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ – ಕೆ.ಎಸ್.ಆರ್.ಟಿ.ಸಿ 2025ನೇ ಸಾಲಿನ, ಎಕನಾಮಿಕ್ ಟೈಮ್ಸ್ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್, ಲೀಡರಶಿಪ್ ಆಂಡ್ ಎಕ್ಸಲೆನ್ಸ್ ಅವಾರ್ಡ್' ಪುರಸ್ಕಾರಕ್ಕೆ ಭಾಜನವಾಗಿದೆ. ಹೊಸ ದಿಲ್ಲಿಯಲ್ಲಿ ಜರುಗಿದ ಸಮಾರಂಭದಲ್ಲಿ ರಾಷ್ಟ್ರೀಯ ಮಾಹಿತಿ ಕೇಂದ್ರದ, ಪ್ರಧಾನ ನಿರ್ದೇಶಕ, ಇಂದರಪಾಲ್ ಸಿಂಗ್ ಅವರು, ನಿಗಮದ ಮುಖ್ಯ ಕಾನೂನು ಅಧಿಕಾರಿ ಟಿ.ವೆಂಕಟೇಶ ಹಾಗೂ ಮುಖ್ಯ ಕಾಮಗಾರಿ ಅಭಿಯಂತರ ಕುತುಬುದ್ದೀನ ಹವಾಲ್ದಾರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು. ರಾಜ್ಯ ಸಾರಿಗೆ ಬಸ್ಸುಗಳಲ್ಲಿ, ಬ್ರಾಂಡಿಂಗ್ ಉಪಕ್ರಮಗಳ ಮೂಲಕ, ಪ್ರಯಾಣಿಕರ ಅನುಭವ ಹೆಚ್ಚಿಸುವಲ್ಲಿ ಕೆ.ಎಸ್.ಆರ್.ಟಿಸಿ. ಸಾಧನೆಗೈದಿದೆ.

<><><>

ಅತಿಸಾರವನ್ನು ಶೂನ್ಯಕ್ಕೆ ತರುವ ಉದ್ದೇಶದಿಂದ, 45 ದಿನಗಳ ವಿಶೇಷ ಅಭಿಯಾನ ರಾಜ್ಯಾದ್ಯಂತ ಪ್ರಗತಿಯಲ್ಲಿದೆ. ಧಾರವಾಡ ಜಿಲ್ಲೆಯಲ್ಲಿ ಒಟ್ಟು, ಸಾವಿರದ 622 ಅಂಗನವಾಡಿ ಕೇಂದ್ರಗಳಲ್ಲಿ ಓ.ಆರ್.ಎಸ್. ಪಾನಕ ವಿತರಿಸುವ, ಜಿಂಕ್ ಕಾರ್ನರ್ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿತ, ಜಿಲ್ಲಾ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಆಶಾ ಹಾಗೂ ಆರೋಗ್ಯ ಕಾರ್ಯಕರ್ತೆಯರು,

ಕ್ಷೇತ್ರ ಮಟ್ಟದಲ್ಲಿ ತಾಯಂದಿರಿಗೆ ಅರಿವು ಮೂಡಿಸುತ್ತಿದ್ದಾರೆ. ಮಕ್ಕಳು ಅತಿಸಾರ ಬಾಧೆಯಿಂದ ಬಳಲದಂತೆ, ಶಾಲಾ ಮಕ್ಕಳಲ್ಲಿ ವಯಕ್ತಿಕ ಸ್ವಚ್ಛತೆ, ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ, ಕ್ರಮ ವಹಿಸಲಾಗಿದೆ ಎಂದರು.

<><><>

ಪರಿತ್ಯಕ್ತ ಅಥವಾ ಕಾನೂನು ಸಂಘರ್ಷಕ್ಕೆ ಒಳಗಾದ ಮಗು, ಆಧಾರ್ ಗುರುತಿನ ಚೀಟಿ ಇಲ್ಲದೆ, ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗದಂತೆ ಖಾತ್ರಿ ಪಡಿಸಲು, ಸಾಥಿ ಯೋಜನೆ ಜಾರಿಗೊಳಿಸಲಾಗಿದೆ. ಸರ್ವೆ ಆಫ್ ಆಧಾರ್ ಅಂಡ್ ಆಕ್ಸೆಸ್ ಟು ಟ್ರಾಕಿಂಗ್ ಅಂಡ್ ಹೊಲಿಸ್ಟಿಕ್ ಇನ್ಕ್ಲೂಷನ್– 'ಸಾಥಿ' ಅಭಿಯಾನದ ಮೂಲಕ, ಮಕ್ಕಳ ಆಧಾರ್ ದಾಖಲಾತಿ ಖಾತ್ರಿ ಪಡಿಸುವಂತೆ, ಶಿವಮೊಗ್ಗ ಜಿಲ್ಲೆ, ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ, ಸಂತೋಷ್ ಎಂ.ಎಸ್. ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಸಾಥಿ ಅಭಿಯಾನದ ಹಿನ್ನೆಲೆ, ಶಿವಮೊಗ್ಗ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ, ಸಭೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

11ನೇ, ಅಂತಾರಾಷ್ಟ್ರೀಯ ಯೋಗ ದಿನ; ಯೋಗ ಇಂದು, ಜೀವನ ಶೈಲಿ ಮಾತ್ರವಲ್ಲ; ಸಂಘಟಿತ ವಿಶ್ವ ನಿರ್ಮಾಣದ, ಲೋಕ ನೀತಿ – ಪ್ರಧಾನಮಂತ್ರಿ ನರೇಂದ್ರ ಮೋದಿ.

ಯೋಗ ಹಾಗೂ ಫಿಟ್ ಇಂಡಿಯಾ ಅಭಿಯಾನ; ಜನರಲ್ಲಿ ಮೂಡಿದ ಆರೋಗ್ಯ ಜಾಗೃತಿ.

ನೇಕಾರಿಕೆ ಉತ್ತೇಜಿಸಲು, ಏಕ ನಿಗಮ ಸ್ಥಾಪನೆಗೆ, ರಾಜ್ಯ ಸರ್ಕಾರದ, ಚಿಂತನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ; 'ಎಕ್ಸಲೆನ್ಸ್' ಪುರಸ್ಕಾರಕ್ಕೆ, ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 9 ಗಂಟೆ 05 ನಿಮಿಷಕ್ಕೆ.

<><><>